1884ನೇ ಇಸವಿ ಅರ್ಜೀ ನಂಬರ್ 114.

ಮೃತಪಟ್ಟ ವೆಂಕಟರಮಣ ದೀಕ್ಷಿತನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ನರಸಮ್ಮನು, ಮೃತಪಟ್ಟ ಸದರೀ ವೆಂಕಟರಮಣ ದೀಕ್ಷಿತನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ತೀರ್ಥಹಳ್ಳೀ ತಾಲ್ಲೂಕು ಶೇತೂರು ಮಾಗಣಿ ಮುಳಬಾಗಲ್ ಸ್ಥಳದ ನರಸಮ್ಮನು, ಸದರೀ ಮುಳಬಾಗಲ್ ವಾಸಸ್ಥನಾಗಿ ಮೃತಪಟ್ಟ ವೆಂಕಟರಮಣ ದೀಕ್ಷಿತನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನರಸಮ್ಮನ ಅರ್ಜೀಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 22ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಮಣ ದೀಕ್ಷಿತನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 115.

ಮೃತಪಟ್ಟ ಗುರುಸಿದ್ದಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಮಲ್ಲವ್ವನು, ಮೃತಪಟ್ಟ ಸದರೀ ಗುರುಸಿದ್ದಪ್ಪನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಕಡೂರು ಡಿಸ್ಟ್ರಿಕ್ಟ್ ತರೀಕೆರೆ ತಾಲ್ಲೂಕು ಅಜ್ಜಂಪುರ ಮಾಗಣಿ ಸೊಲ್ಲಾಪುರ ಸ್ಥಳದ ಮಲ್ಲವ್ವನು, ಸದರೀ ಸೊಲ್ಲಾಪುರ ಗ್ರಾಮದ ವಾಸಸ್ಥನಾಗಿಮೃತಪಟ್ಟ ಗುರುಸಿದ್ದಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲಗಳನ್ನು ಮೃತಪಟ್ಟ ಗುರುಸಿದ್ದಪ್ಪನ ಮಗ ಸಿದ್ದರಾಮ ಯಂಬವನಿಗೆ ಗಾರ್ಡಿಯನ್ನಾಗಿ ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮಲ್ಲವ್ವನ ಅರ್ಜೀಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 22ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುರುಸಿದ್ದಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ನವೆಂಬರ್ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಸ್ಯ 1884ನೇ ಇಸವಿ ಅಕ್ಟೋಬರ್ ತಿಂಗಳ ಕಾಲಸ್ಥಿತೀ ರಿಪೋರ್ಟುಗಳು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ.—ಹೆಡ್ ಕ್ವಾರ್ಟರ್ಸ್‌ನಲ್ಲಿ 6 ಅಂಗುಲ 69 ಸೆಂಟಿಸ್ ಮಳೆ ಅಳೆಯಲ್ಪಟ್ಟಿತು. ಡಿಸ್ಟ್ರಿಕ್ಟ್ ಮುಳೆ ಸಾಧಾರಣವಾಗಿ ಮಳೆ ಬಿದ್ದು ಬೆಳೆಯಲ್ಲಿರುವ ಫಸಲಿಗೆ ಮೇಲು ಉಂಟಾಯಿತು; ತಲಾವ್‌ಗಳ ಕೆಳಗಿನ ತರೀ ಸಾಗುವಳಿ ಕೆಲಸಗಳಿಗೆ ಯಿನ್ನೂ ಮಳೆ ಬೇಕಾಗಿ ಯಿಧೆ.

ಫಸಲಿನ ಸ್ಥಿತಿ.—ಬೆಳೆಯಲ್ಲಿರುವ ಫಸಲ್ ಛಂದಾಗಿಧೆ. ಅನೇಕ ಸ್ಥಳಗಳಲ್ಲಿ ಹುರಳಿ ಪೀರಾವಾಯಿತು.

ಜನಾರೋಗ್ಯ.—ಸಾಧಾರಣವಾಗಿ ಛಂದಾಗಿಧೆ. ಸೆಪ್ಟಂಬರ್ ಮಾಹೆಯಲ್ಲಿ 644 ಮಂದಿಯೂ ಅದರ ಹಿಂದಿನ ತಿಂಗಳಲ್ಲಿ 619 ಮಂದಿಯೂ ಮೃತಪಟ್ಟಿರುತ್ತಾರೆ; ಪೊಕ್ಕಾ ಬಿಲಾ 25 ಮಂದಿ ಜಾಸ್ತಿ, ಮುಖ್ಯವಾಗಿ ಜ್ವರದಿಂದಲೇ ಮೃತಪಟ್ಟಿರುತ್ತಾರೆ.

ಕಾಲ್ನಡಿ.—ಆರೋಗ್ಯವಾಗಿವೆ, ಮತ್ತು ಮೇವು ನೀರಿಲ್ಲದೆ ನಾದಾರಾಗಿದ್ದ ಕಾಲ್ನಡಿಗಳು ಈಗ ಕುದುರಿಕೊಳ್ಳುತ್ತಾ ಯಿವೆ. ಸದರೀ ಮಾಹೆಯಲ್ಲಿ 2,465 ಕಾಲ್ನಡಿಗಳೂ ಅದರ ಹಿಂದಿನ ತಿಂಗಳಲ್ಲಿ 2,464 ಕಾಲ್ನಡಿಗಳೂ ಹೋಗಿರುತವೆ. ಸದರೀ ಮಾಹೆಯಲ್ಲಿ ದುಷ್ಟ ಮೃಗಗಳಿಂದ 170 ಕಾಲ್ನಡಿಗಳು ಕೊಲ್ಲಲ್ಪಟ್ಟವು.

ಜಮ್ಮಿ.—ಸಾಗುವಳಿ ಬಗ್ಯೆ 2,523—3—11 ರೂಪಾಯಿ ಕಂದಾಯ ಬಾಳುವ ಜಮ್ಮಿನು ತೆಗದುಕೊಳ್ಳಲ್ಪಟ್ಟಿತು; ರಾಜೀನಾಮೆ ಯಾವದೂ ಯಿಲ್ಲವು.

ಎ. ಹೆಚ್. ಮೆಕ್ಕಿಂಟೈರ್,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ಮಳೆ.—ಈ ಮಾಹೆಯಲ್ಲಿ ಯಲ್ಲ ತಾಲ್ಲೂಕುಗಳಲ್ಲೂ ವಿಶೇಷವಾಗಿ ಮಳೆ ಆಯಿತು. ಸರಾಸರಿ 5 ಅಂಗುಲ 81 ಸೆಂಟಸ್ ಮಳೆ ಅಳಿಯಲ್ಪಟ್ಟಿತು.

ಫಸಲ್.—ಬೆಳೆಯಲ್ಲಿರುವ ಫಸಲ್ ವಳ್ಳಿಯ ಸ್ಥಿತಿಯಲ್ಲಿದೆ. ರಾಗಿ, ಹುರಳಿ, ಭತ್ತ, ಜೋಳ, ಕಡಲೆ, ಕೊತ್ತಂಬರಿ, ಯಳ್ಳು, ವೆದ್ದು, ಹೆಸರು ಯಿವು ಬಿತ್ತಲ್ಪಟ್ಟವು. ಕಾರ್‌ರಾಗಿ, ಸಾಮೆ ಮತ್ತು ನವಣೆ ಯಿವು ಕಟಾವಾದವು.

ಜನಾರೋಗ್ಯ.—ಸಾಧಾರಣವಾಗಿ ಜನಾರೋಗ್ಯ ಛಂದಾಗಿದೆ. ಪರಂತು ನಂಜನಗೂಡು ಮತ್ತು ಯಡತೊರೆ ತಾಲ್ಲೂಕುಗಳ ಕೆಲವು ಪ್ರಾಂತ್ಯದಲ್ಲಿ ಮೂತ್ರ ಉಖಾಲ್ ಜ್ವರಾಬಿನ ಉಪದ್ರವ ವ್ಯಾಪಿಸಿರುತ್ತೆ.

ಕಾಲ್ನಡಿ.—ಡಿಸ್ಟ್ರಿಕ್ಟಾ ಮುಳೆ ವರ್ಗೆ ರೋಗ ನಿವೃತ್ತಿಯಾಗಿರುತ್ತೆ. ದುಷ್ಟಮೃಗಗಳಿಂದ ಕೊಲ್ಲಲ್ಪಟ್ಟ 119 ಜ್ಞಾವಾರ್‌ಗಳು ದೇಖೀಲ್ ವಟ್ಟು 2,820 ಕಾಲ್ನಡಿಗಳು ಇತರ ಕಾರಣಗಳಿಂದ ನಷ್ಟವಾಗಿರುತ್ತೆ.

ದಾರಣೆ.—ಆಹಾರ ಜಿನಸಿಗಳ ದಾರಣೆಯು ಯಿದರಡೀಕಂಡ ಪ್ರಕಾರ ಯಿರುತ್ತೆ:—

ಅಕ್ಕಿ ಅವ್ವಲ್ ತರಹೆ ರೂಪಾಯಿ ಬಂದಕ್ಕೆ ಶೇರು 10	ರಾಗಿ ರೂಪಾಯಿ ಬಂದಕ್ಕೆ ಶೇರು 25
ಡಿಟೋ ದುಯ್ಯಂ ತರಹೆ ಡಿಟೋ ಡಿಟೋ 11	ಹುರಳಿ ಡಿಟೋ ಡಿಟೋ ,, 23

ಅಬ್ದುಲ್‌ಖಾದರ್, ಕೆ. ಬಿ.,
ಡೆಪ್ಯೂಟಿ ಕಮ್ಮಿಷನರ್.

ಗೈರ್ ವಿಲಾ

ಆದ ಕರೆನ್ಸಿನೋಟ್.

ನಂಬರ್.	ಸರ್ಕಲ್.	ಕ್ರಯ.	ಹಕ್ಕುದಾರ್.—ಮೈಸೂರು ಶ್ರೀವರ್ಮ ಮಹಾರಾಜರವರ ಕಾಲೇಜ್ ಹೆಡ್ ಮಾಸ್ಟರ್ ಮೆ|| ಹೆಚ್. ಜೆ. ಬಾಭಾಯವರು.
B—84 32527.	ಮದರಾಸ್.	ರೂ. 100.	

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಂಡಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರ ದೆಸೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬಿಗೆ ಬಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಬಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿನೇನೇ ಸರ್ವಜನಗಳಿಗೂ ಒಡಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಬಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಬಂದು ಪೌಂವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ನೇಟವ್ ಪುದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಬಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಪೋಸಲೂ ಕೊಡಬೇಕು.

Mysore Government Press, Bangalore.—1884.